MYSORE LEGISLATIVE ASSEMBLY

SIXTEENTH DAY.

Tuesday, 17th March 1964.

The House met in the Assembly Hall, Vidhana Soudha, Bangalore-1 at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

Mr. SPEAKER.—The Hon'ble Members concerned are not present to put Question Nos. 106, 108 and 150 and the members are complaining that Government do not send replies to their questions.

STARRED QUESTIONS

(to which oral answers were given).

Nationalisation f Bus Routes in Kolar District during 1964

*Q.—175. Sri E. NARAYANA GOWDA (Bangarpet).—

Will the Government be pleased to state :—

(*a*) whether the Mysore Road Transport Corporation have proposed to nationalise the bus routes in Kolar District during 1964 ;

(*b*) if so, the action taken by them in this regard ;

(*c*) the number of routes that will come under nationalisation together with the mileage ?

*A.—Sri D. DEVARAJ URS (Minister for Labour, Housing and Transport).—

(*a*) Yes.

(*b*) A draft scheme under Section 68C of the Motor Vehicles Act, 1939, has been published by the Mysore State Road Transport Corporation.

(*c*) Eighty-seven routes with a total route mileage of 3,648 approximately will come under the proposed scheme.

ಶ್ರೀ ಇ. ನಾರಾಯಣ ಗೌಡ.—ಈ ಪ್ರಿಲಿಮಿನರಿ ನೋಟಿಫಿಕೇಷನ್ನನ್ನು ಯಾವ ತಾರೀಖಿನಲ್ಲಿ ಹೊರಡಿಸಿದಿರಿ ?

ಶ್ರೀ ಡಿ. ದೇವರಾಜ ಅರಸ್.—1963ನೇ ಇಸವಿಯೆಲ್ಲ.

ಶ್ರೀ ಇ. ನಾರಾಯಣ ಗೌಡ.—ಈ 3,648 ಮೈಲಿಗಳಲ್ಲಿರತಕ್ಕ 87 ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳು ಎಷ್ಟು ಓಡಾಡುತ್ತವೆ ?

ಶ್ರೀ ಡಿ. ದೇವರಾಜ ಅರಸ್.—ಸುಮಾರು 175 ಬಸ್ಸುಗಳು ಓಡಾಡುತ್ತಿವೆ.

Sri S. M. KRISHNA.—Sir, what is the idea of Government ? They keep shifting this nationalisation scheme from district to district every year. At first, it was said that Bellary was going to be nationalised and after some time Mangalore was talked about. And now there is a preliminary notification about Kolar District. How does the Corporation come to the conclusion that nationalisation should start in a particular district ?

Sri D DEVARAJ URS.—The Hon'ble Member, if he had looked into the Gazette notification, perhaps, would not have put this question. We have not merely taken Kolar. This time it is route-wise nationalisation. It covers all the districts of the State, *i.e.*, erstwhile Mysore State.

Sri G. V. GOWDA.—In November, draft notification was published. May I know the time allotted for prefer ring objections and whether objections preferred by private operators were considered and decision taken ?

Mr. SPEAKER.—The contents of notification need not be elicited by way of a supplementary question.

Sri G. V. GOWDA.—I do not want that. I want to know the time allotted for preferring objections and whether objections were heard and a decision taken.

Mr. SPEAKER.—It is a notification published in the Gazette. All Hon'ble Members are receiving copies of the Gazette.

Sri G. V. GOWDA.—I want to know whether any objections were received and considered.

Sri D. DEVARAJ URS.—Sir, Hon'ble Member is a lawyer and he knows. A notification has been issued in accordance with Section 68 C of the Mysore Motor Vehicles Act. Objections will be heard by the Chief Minister, who is a quasi-judicial body.

Sri G. V. GOWDA.—May I know whether a decision is taken by the Chief Minister ?

Sri D. DEVARAJ URS.—How can it be ? It is in the month of November that the notification was published. Decision will be taken hortly.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ್ಗೆ 3 ವರ್ಷಗಳ ಕೆಳಗೆ ಕೋಲಾರ ಜಿಲ್ಲೆಯಲ್ಲಿ ಬಸ್ ಬೈನನ್ನು ರಾಷ್ಟ್ರೀಕರಣ ಮಾಡುವುದಕ್ಕೆ ನೋಟಿಫಿಕೇಷನ್ ಪಬ್ಲಿಷ್ ಆಗುವ ಸಂದರ್ಭದಲ್ಲಿ ರಾಜಕೀಯ ಪ್ರಮುಖರ ಒತ್ತಡವಿಂದ ಅದನ್ನು ಕ್ಯಾನ್ಸಲ್ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri D. DEVARAJ URS.—I am not aware what has happened three years back.

Sri RAJA PID NAIK.—May I know how many years more it will take to nationalise the entire State ?

Sri D. DEVARAJ URS.—Only yesterday I answered that question. We hope to nationalise the entire State.....

Mr. SPEAKER.—Where was it answered ?

Sri D. DEVARAJ URS.—In the other House.

Mr. SPEAKER.—We are unaware.

Sri D. DEVARAJ URS.—I am answering, Sir. By the end of the fourth plan period, we hope to complete nationalisation.

ಶ್ರೀ ಇ. ನಾರಾಯಣ ಗೌಡ.—ಈಗ ಕೋಲಾರ ಜಿಲ್ಲೆಯಲ್ಲಿ ಬಸ್ ಲೈನನ್ನು ಪೂರ್ಣವಾಗಿ ರಾಷ್ಟ್ರೀಕರಣ ಮಾಡುವುದರಿಂದ ಅಲ್ಲಿ ನಿರುದ್ಯೋಗಿಗಳಾಗತಕ್ಕ ಕಂಡಕ್ಟರುಗಳು ಮತ್ತು ಡ್ರೈವರುಗಳಿಗೆ ಏನು ಪರಿಹಾರವನ್ನು ಒದಗಿಸುತ್ತೀರಿ ? ಮತ್ತು ಆ ಬಸ್ ಲೈನುಗಳನ್ನು ಕಳೆದುಕೊಂಡ ಖಾಸಗೀ ಬಸ್ ಮಾಲೀಕರುಗಳಿಗೆ ಕಾಂಪೆನ್‌ಸೇಷನ್ ಕೊಡತಕ್ಕ ವಿಚಾರವನ್ನು ಸರ್ಕಾರದವರು ಯೋಚನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಈಗ ಕೋಲಾರ ಜಿಲ್ಲೆಯಲ್ಲಿ ಕೆಲವು ರೂಟುಗಳನ್ನು ಮಾತ್ರ ನ್ಯಾಷನಲೈಜ್ ಮಾಡುತ್ತೇವೆ. ಇಂಡಿವಿಜುಯಲ್ ರೂಟ್ಸ್‌ಗಳನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿ 100 ಬಸ್ಸುಗಳನ್ನು ಹಾಕುತ್ತೇವೆ. ಈಗ ಒಟ್ಟು 87 ರೂಟುಗಳಿವೆ. ಈ ಜೊತೆಗೆ ಕೆಲವು ರೂಟುಗಳನ್ನು ಮಾತ್ರ ನ್ಯಾಷನಲೈಜ್ ಮಾಡುತ್ತೇವೆ. ಆ ಬಸ್ ಲೈನನ್ನು ರಾಷ್ಟ್ರೀಕರಣ ಮಾಡುವುದರಿಂದ ಕೆಲಸವನ್ನು ಕಳೆದುಕೊಳ್ಳತಕ್ಕ ನೌಕರರ ವಿಷಯದಲ್ಲಿ ಹೇಳುವುದಾದರೆ ಈಗಾಗಲೇ ಬೇರೆ ನ್ಯಾಷನಲೈಜ್ ಮಾಡಿರುವ ಕಡೆ ಖಾಸಗೀಯವರ ಹತ್ತಿರ ಕೆಲಸ ಮಾಡುತ್ತಿದ್ದ ನೌಕರರಿಗೆ ಕೆಲವು ಕಂಡೀಷನ್ಸ್ ಮೇಲೆ ಕೆಲಸವನ್ನು ಕೊಡುತ್ತಿದ್ದೇವೆ. ಬಸ್ ಲೈನನ್ನು ಕಳೆದುಕೊಂಡ ಖಾಸಗೀ ಬಸ್ ಮಾಲೀಕರಿಗೆ ಕಾಂಪೆನ್‌ಸೇಷನ್ ಅನ್ನು ಕೊಡುವ ವಿಚಾರದಲ್ಲಿ ಲೈಸೆನ್ಸ್ ಅವಧಿ ಮುಗಿಯುವುದರೊಳಗೇ ರಾಷ್ಟ್ರೀಕರಣ ಮಾಡಿದರೆ ಅಂಥ ಸಂದರ್ಭದಲ್ಲಿ ರೂಲ್ಸ್ ಪ್ರಕಾರ ಯಾರುಯಾರಿಗೆ ಎಷ್ಟೆಷ್ಟು ಕಾಂಪೆನ್‌ಸೇಷನ್ ಕೊಡಬೇಕೋ ಅದನ್ನು ಕೊಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಕೋಲಾರ ಜಿಲ್ಲೆಯಲ್ಲಿ ಕೆಲವು ಬಸ್ ಮಾಲೀಕರ ಲೈಸೆನ್ಸ್ ಗಳನ್ನೂ ರಿನ್ಯೂ ಮಾಡಿರುವುದರಿಂದ ಇನ್ನೂ ಮೂರು ವರ್ಷಗಳ ಕಾಲ ಆ ಲೈನುಗಳನ್ನು ರಾಷ್ಟ್ರೀ ಕರಣ ಮಾಡುವಹಾಗಿಲ್ಲ ಎನ್ನುವುದು ಅರ್ಥವಾಗುತ್ತದೆ ಅಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಲ್ಲ. ಬಸ್ ಲೈಸೆನ್ಸ್ ಕೊಡುವುದು, ರಿನ್ಯೂ ಮಾಡುವುದು, ಆರ್. ಟಿ. ಎ. ಅವರಿಗೆ ಸೇರಿದ್ದು. ಅದು ಕ್ವಾಸಿ ಜುಡಿಷಿಯಲ್ ಬಾಡಿ ಅವರು ಯಾವಾಗ ಬಸ್ ಲೈನುಗಳನ್ನು ರಿನ್ಯೂ ಮಾಡ ಬೇಕೋ ಆಗ ಕಾನೂನು ಪ್ರಕಾರ ರಿನ್ಯೂ ಮಾಡುತ್ತಾರೆ. ಸರ್ಕಾರದವರು ಬಸ್ ಲೈನನ್ನು ರಾಷ್ಟ್ರೀಕರಣ ಮಾಡುವಾಗ ಆರ್.ಟಿ.ಎ.ನವರು ಲೈಸೆನ್ಸ್ ಕೊಡುವುದನ್ನಾಗಲೀ ಅಥವಾ ರಿನ್ಯೂ ಮಾಡುವುದನ್ನಾಗಲೀ ನೋಡಿ ರಾಷ್ಟ್ರೀಕರಣ ಮಾಡುವುದಿಲ್ಲ. ರಾಷ್ಟ್ರೀಕರಣ ಮಾಡತಕ್ಕ ವಿಚಾರದಲ್ಲಿ ಯೋಜನೆಗಳನ್ನು ಹಾಕಿ ಕೊಂಡಿರುತ್ತೇವೆ ಅದರ ಪ್ರಕಾರ ಮಾಡುತ್ತೇವೆ. ಒಂದು ವೇಳೆ ನಾವು ರಾಷ್ಟ್ರೀಕರಣ ಮಾಡತಕ್ಕ ಬಸ್ ಲೈನಿಗೆ ಆರ್. ಟಿ. ಎ. ನವರು ಲೈಸೆನ್ಸ್ ಕೊಟ್ಟಿದ್ದರೂ ಕೂಡ ಮಧ್ಯಕಾಲದಲ್ಲಯೇ ಅದನ್ನು ರಾಷ್ಟ್ರೀಕರಣ ಮಾಡಿದರೆ ಅವರಿಗೆ ಕಾನೂನು ರೀತಿ ಎಷ್ಟು ಪರಿಹಾರವನ್ನು ಕೊಡಬೇಕಾಗುತ್ತದೆಯೋ ಅಷ್ಟು ಪರಿಹಾರವನ್ನು ಕೊಡುತ್ತೇವೆ.

ಶ್ರೀ ಎಚ್ ಆರ್. ಕೇಶವಮೂರ್ತಿ.—ಹೊಸ ಹೊಸದಾಗಿ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡಲು ಪಾಲಸಿಯನ್ನು ಹಾಕಿಕೊಳ್ಳುತ್ತಾ ಇದ್ದೀರಿ. ಹಾಸನ ಡಿಸ್ಟ್ರಿಕ್ಟಿನಲ್ಲಿ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡಿದ ಮೇಲೆ ಅಲ್ಲಿನ ಅವ್ಯವಸ್ಥೆಯನ್ನು ನೋಡುವುದಕ್ಕೆ ಎರಡು ಕಣ್ಣುಗಳೂ ಸಾಲುವುದಿಲ್ಲ. ಅದನ್ನು ಸರಿಮಾಡುವುದಕ್ಕೆ ಏನು ವ್ಯವಸ್ಥೆಯನ್ನು ಮಾಡಿದ್ದೀರಿ ?

Sri D. DEVARAJ URS.—Sir, that question does not arise out of this. This question pertains to Kolar nationalisation.

Sri H. R. KESHAVA MURTHY.—It refers to the State.

Mr. SPEAKER.—The Hon'ble Minister should know to what district the question relates ?

Sri G. V. GOWDA.—After the draft scheme is published, has it come to the notice of the Government that private operators have secured extension of their permits and the M. R. T. C. has not filed any objection ? -

Sri D. DEVARAJ URS.—I am not aware. The extension may have been given by the R. T. A. He is not under the Government or under the M.S.R.T.C.

ಶ್ರೀ ಕೆ. ಪಿ. ದೇವಣ್ಣಸಿದ್ದಪ್ಪ.—ಇಂತಿಂಥಾ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ, ಅವುಗಳಿಗೆ ಲೈಸೆನ್ಸ್ ಕೊಡಬಾರದು ಎಂದು ಆರ್. ಟಿ. ಎ ಅವರಿಗೆ ಏತಕ್ಕೆ ತಿಳಿಸಬಾರದು ?

Mr. SPEAKER.—These are all events that may occur in the future.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕೆಂದು ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಆರ್. ಟಿ. ಎ. ಅವರು ಕ್ಯಾಸಿ ಜುಡಿಷಿಯರ ಬಾಡಿ. ಅವರು ಸರ್ಕಾರದವರ ಕೈಕೆಳಗೆ ಇರುವುದಿಲ್ಲ. ಅಥವಾ ಎಂ. ಎಸ್. ಆರ್. ಟಿ. ಸಿ ಯವರ ಕೈಕೆಳಗೂ ಇರುವುದಿಲ್ಲ. ನಾವು ಇಂತಿಂಥಾ ಲೈನುಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಅವುಗಳಿಗೆ ಲೈಸೆನ್ಸ್ ಕೊಡಬೇಡಿ ಎಂದು ಸರ್ಕಾರದವರು ಹೇಳುವುದಕ್ಕೆ ಸದ್ಯದಲ್ಲಿ ಆ ಕಾನೂನು ಇಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೋಲಾರ ಜಿಲ್ಲೆಯಲ್ಲಿ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡುವುದರಿಂದ ನಿರುದ್ಯೋಗಿಗಳಾಗತಕ್ಕ ಖಾಸಗೀ ಬಸ್ ಮಾಲೀಕರುಗಳಿಗೆ ಅವರ ಜೀವನಕ್ಕೆ ಯಾವ ಉದ್ಯೋಗವನ್ನು ಕಲ್ಪನೆ ಮಾಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಆ ಬಸ್ ಲೈನನ್ನು ರಾಷ್ಟ್ರೀಕರಣ ಮಾಡಿದಮೇಲೆ ಅಲ್ಲಿ ಕೆಲಸ ಮಾಡುತ್ತಿದ್ದ ಡ್ರೈವರುಗಳು ಮತ್ತು ಕಂಡಕ್ಟರುಗಳು ಕೆಲಸ ಮಾಡುವುದಕ್ಕೆ ತಯಾರಾಗಿದ್ದರೆ ಅಂಥ ವರನ್ನು ಕೆಲವು ಕಂಡೀಷನ್ಸ್ ಮೇಲೆ ನಾವು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ. ಇನ್ನು ಬಸ್ ಮಾಲೀಕರಿಗೆ ಪರಿಹಾರ ಕೊಡತಕ್ಕ ವಿಷಯದಲ್ಲಿ ಹೇಳುವುದಾದರೆ ನಾವೇನು ಅವರಿಗೆ ಸಾಯುವತನಕ ಊಟವನ್ನು ಹಾಕುತ್ತೇವೆಂದು ಹೇಳಿಲ್ಲ. ಬಸ್ ಲೈಸೆನ್ಸ್ ಅವಧಿ ಮುಗಿಯುವುದರೊಳಗೇ ಅದನ್ನು ರಾಷ್ಟ್ರೀಕರಣ ಮಾಡಿದರೆ ಆಗ ಮಾತ್ರ ಬಸ್ ಲೈನನ್ನು ಕಳೆದುಕೊಂಡ ಬಸ್ ಮಾಲೀಕರು ಪರಿಹಾರಕ್ಕೆ ಅರ್ಹರೇ ಹೊರತು ಒಂದು ವೇಳೆ 3 ವರ್ಷಗಳವರೆಗೆ ಬಸ್ ಲೈಸೆನ್ಸ್ ಕೊಟ್ಟಿದ್ದು ಆ 3 ವರ್ಷವೂ ಕಳೆದು ಹೋಗಿದ್ದು ಅನಂತರ ಅದನ್ನು ರಾಷ್ಟ್ರೀಕರಣ ಮಾಡಿದ್ದರೆ ಅವರಿಗೆ ಪರಿಹಾರವನ್ನು ಕೊಡುವುದಕ್ಕಾಗುವುದಿಲ್ಲ. ಮತ್ತು ಅವರು ಪರಿಹಾರಕ್ಕೆ ಅರ್ಹರೂ ಅಲ್ಲ.

Sri S. SIVAPPA.—Sir, I am raising fundamental question. When they are taking out the livelihood of a man, is it not the fundamental duty of the Government to give another vocation for that person ?

Mr. SPEAKER.—It is a very good idea.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೋಲಾರದಲ್ಲಿ ರಾಷ್ಟ್ರೀಕರಣ ಪದ್ಧತಿಯನ್ನು ಒಪ್ಪಿಕೊಂಡ ಮೇಲೆ ನಾಯಿ ತಿಂದ ಕಜ್ಜಾಯ ಮಾಡಿ ಕೆಲವು ರೂಟುಗಳನ್ನು ರಾಷ್ಟ್ರೀಕರಣ ಮಾಡಿ ಕೆಲವು ರೂಟುಗಳಲ್ಲಿ ಒಬ್ಬರು ಮಂತ್ರಿಗಳ ನೆಂಟರಿಷ್ಟರು ಇದ್ದಾರೆಂದು ಅವುಗಳನ್ನು ಏತಕ್ಕೆ ಕೈಬಿಟ್ಟಿದ್ದೀರಿ ?

Sri D. DEVARAJ URS.—My friend has a jaundiced eye. ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ.

Sri C. J. MUCKANNAPPA.—My eyes are very clean and clear.

Mr. SPEAKER.—Since there is a controversy I do not know how to decide it.

Sri H. R. KESHAVA MURTHY.—We will have to come to a decision, Sir.

Mr. SPEAKER.—If what the Hon'ble Minister says is correct, I will have the Hon'ble Member treated.

(Laughter)

ಶ್ರೀ ಡಿ. ದೇವರಾಜ ಅರಸ್.—ಈಗ ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾಗಿರುವುದು ಈ ರೀತಿ ಇದೆ: ಬೆಂಗಳೂರು—ಕೋಲಾರ—ಕೆ. ಜಿ. ಎಫ್. ಈ ಲೈನ್ ರಾಷ್ಟ್ರೀಕರಣವಾಗಿದೆ. ಬೆಂಗಳೂರಿನಿಂದ ದೇವನಹಳ್ಳಿಗೆ ಹೋಗುವ ಲೈನು ರಾಷ್ಟ್ರೀಕರಣವಾಗಿದೆ. ಇಷ್ಟು ಪಾರ್ಟ್ ರಾಷ್ಟ್ರೀಕರಣವಾಗಿದ್ದರೂ ಬೆಂಗಳೂರು—ಕೋಲಾರ ಪಾರ್ಟ್‌ನಲ್ಲಿ ಒಂದು ಕಡೆ ಗೋರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಶ್ರೀನಿವಾಸಪುರ ಮಾಲೂರು ಈ ಪ್ರದೇಶಗಳಲ್ಲಿ ಕೆಲವು ಬಸ್‌ಗಳು

ಹೋಗುತ್ತವೆ. ಎಲ್ಲಾ ಕಡೆಗಳಲ್ಲೂ ಖಾಸಗೀ ಬಸ್ ಮಾಲೀಕರ ಜೊತೆಯಲ್ಲಿ ಕಾಂಪಿಟ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೋಸ್ಕರ ಯಾವುದು ಮುಖ್ಯವೋ ಅಂಥಾ ರೂಟುಗಳನ್ನು ರೂಟ್‌ವೈಜ್ ರಾಷ್ಟ್ರೀಕರಣ ಮಾಡಿದ್ದೇವೆ. ಆದ್ದರಿಂದ ಶ್ರೀಮಾನ್ ಮುಕ್ಕಣ್ಣಪ್ಪನವರು ಕೆಲವು ಲೈನುಗಳನ್ನು ರಾಷ್ಟ್ರೀಕರಣ ಮಾಡಿ ಕೆಲವು ಲೈನುಗಳನ್ನು ಹಾಗೆಯೇ ಬಿಟ್ಟಿದ್ದೀರಿ ಎಂದು ಕೇಳುವ ಪ್ರಶ್ನೆಯೇ ಇಲ್ಲ.

ಶ್ರೀ ಇ. ನಾರಾಯಣ ಗೌಡ —ಈಗ ಖಾಸಗಿ ಬಸ್ಸುಗಳ ಜೊತೆಯಲ್ಲಿ ನಿಮ್ಮ ಬಸ್ಸುಗಳನ್ನೂ ನಡೆಸುತ್ತಿರುವುದರಿಂದ ನಷ್ಟವಾಗುತ್ತದೆ ಎಂದು ಹೇಳಿದಿರಿ. ಈ ಖಾಸಗಿ ಬಸ್ಸುಗಳವರು ಕಡಮೆ ದರ ತೆಗೆದುಕೊಳ್ಳುತ್ತಾರೆ, ನಿಮ್ಮ ಬಸ್ಸುಗಳಿಗಿಂತ ಚೆನ್ನಾಗಿರುತ್ತವೆ, ಒಳ್ಳೆಯ ಕಂಡಿಷನ್ ನಲ್ಲಿರುತ್ತವೆ, ನಮ್ಮ ಬಸ್ಸುಗಳು ಆ ರೀತಿ ಇರುವುದಿಲ್ಲ ಎಂದು ಈ ಮಾನ್ಯ ಸಭೆಯಲ್ಲಿಯೇ ಜಿಜ್ಞಾಸೆಗೆ ಒಳಪಟ್ಟಿರುತ ದೆ. ಖಾಸಗಿ ಬಸ್ಸುಗಳವರು ಪ್ರಯಾಣಿಕರಿಗೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸುತ್ತಾರೆ. ಸರ್ಕಾರದವರೂ ಅದೇ ರೀತಿ ಕಡಿಮೆ ದರವನ್ನು ತೆಗೆದುಕೊಂಡು ಸೌಕರ್ಯಗಳನ್ನೂ ಕಲ್ಪಿಸಿ ಕೊಡುತ್ತೀರಾ, ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಮೊದಲನೆಯದಾಗಿ ಮಾನ್ಯ ಸದಸ್ಯರ ಭಾವನೆ ಏನಿದೆ, ಖಾಸಗಿ ಮಾಲೀಕರು ಕಡಮೆ ದರದಲ್ಲಿ ಓಡಿಸುತ್ತಾರೆ ಎನ್ನುವುದು, ಅದು ಸರಿಯಲ್ಲ. ಕೆಲವು ಕಡೆ ಅವರು ಕಡಮೆ ದರದಲ್ಲಿ ಓಡಿಸಿದರೂ ಅನೇಕ ಕಡೆ ಹೆಚ್ಚು ದರ ತೆಗೆದುಕೊಳ್ಳುತ್ತಿದ್ದಾರೆ. ಮೊನ್ನೆ ತಾನೇ ಬೆಂಗಳೂರು ಹತ್ತಿರದ ಹಳ್ಳಿಯಿಂದ ಕೆಲವು ಜನ ನನ್ನ ಹತ್ತಿರ ಬಂದಿದ್ದು ಆನೆಕಲ್ ಪಾಕೆಟ್‌ನಲ್ಲಿ ರಾಷ್ಟ್ರೀಕರಣ ಮಾಡಿದ್ದರಿಂದ ಬಹಳ ಸೌಕರ್ಯವಾಯಿತು, ಇಲ್ಲಿಂದ ಕೇವಲ 15 ಮೈಲಿಗೆ ಒಂದೂವರೆ ರೂಪಾಯಿ ಚಾರ್ಜ್ ತೆಗೆದುಕೊಳ್ಳುತ್ತಿದ್ದರು, ಈಗ ಸರ್ಕಾರದ ಬಸ್ಸು ಹಾಕಿದ ಮೇಲೆ ಪೂರ್ತಿ ಅನುಕೂಲವಾಗಿದೆ ಎಂದು ಹೇಳಿದರು. ಬೆಂಗಳೂರಿನಿಂದ ಕನಕಪುರ ಮಾರ್ಗವಾಗಿ ಮೈಸೂರಿಗೆ ಹೋಗತಕ್ಕ ಬಸ್ಸುಗಳಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಕಡಮೆ ಚಾರ್ಜು ಮಾಡುತ್ತಾರೆ. ಮಧ್ಯ ಪ್ರಯಾಣ ಮಾಡುವವರಿಂದ ಇಷ್ಟು ಬಂದ ಹಾಗೆ ತೆಗೆದುಕೊಳ್ಳುವುದು ನನ್ನ ಗಮನಕ್ಕೆ ಬಂದಿದೆ. ಅದುದರಿಂದ ನನ್ನ ಸ್ನೇಹಿತರು ಹೇಳುವುದು ಸರಿಯಲ್ಲ. ಖಾಸಗಿಯವರು ಒಂದು ಕಡೆ ಒಂದು ದರದಲ್ಲಿ ತೆಗೆದುಕೊಳ್ಳುತ್ತಾರೆ, ಇನ್ನೊಂದು ಕಡೆ ಹೆಚ್ಚು ದರ ತೆಗೆದುಕೊಳ್ಳುತ್ತಾರೆ. ಯಾವುದಕ್ಕೂ ಇತಿಮಿತಿ ಇಲ್ಲದೆ ಕೆಲಸ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ.

ಸ್ವಾಮಿ, ಖಾಸಗಿಯವರು ಹೆಚ್ಚು ಅನುಕೂಲಗಳನ್ನು ಕಲ್ಪಿಸುತ್ತಿದ್ದಾರೆ ಎನ್ನುವುದು ಅವರ ಅಭಿಪ್ರಾಯವಾಗಿರಬಹುದು. ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ನವರು ಕೊಡತಕ್ಕ ಸೌಲಭ್ಯಗಳು, ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಬಸ್ಸು ಪೆಲ್ಟರುಗಳನ್ನು ಕಟ್ಟಿರುವುದು, ಬಸ್ಸು ಸ್ಟ್ಯಾಂಡ್ ಸೌಕರ್ಯ ಏರ್ಪಡಿಸಿರುವುದು, ಲಗ್ಗೇಜನ್ನು ತೆಗೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿರುವುದು ಹೀಗೆ ಇವೆ. ಆದರೆ ಇಂಥ ಯಾವುದಾದರೂ ಒಂದು ಸೌಕರ್ಯವನ್ನಾದರೂ ಖಾಸಗಿ ಮಾಲೀಕರು ಕೊಟ್ಟಿದ್ದಾರೆ ಎಂದರೆ ಒಪ್ಪಿಕೊಳ್ಳಬಹುದು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಖಾಸಗಿ ಬಸ್ಸು ಮಾಲೀಕರ ಹತ್ತಿರ ಇದ್ದವರು ನಿರುದ್ಯೋಗಿಗಳಾಗದೆ ಇರಲು ಅವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ಕೆಲವು ಷರತ್ತುಗಳ ಮೇಲೆ ನೇಮಿಸಿಕೊಳ್ಳುವುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಅನೇಕ ವೇಳೆ ಶಿಕ್ಷೆ ಅನುಭವಿಸಿದಂಥ ಮತ್ತು ತಪ್ಪುಗಳನ್ನು ಮಾಡಿರುವಂಥ ಸೌಕರರಿರುತ್ತಾರೆ. ಅದನ್ನು ಕೂಡ ಗಮನದಲ್ಲಿಟ್ಟು ನಿರುದ್ಯೋಗಿಗಳಾಗುವವರನ್ನು ನೇಮಿಸುತ್ತೀರಾ, ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಕೊಟ್ಟ ಸಲಹೆ ಸೂಕ್ತವಾಗಿದೆ. ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—87 ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದ್ದೀರಿ. ಬೆಂಗಳೂರಿನಿಂದ ಮಂಗಳೂರಿಗೆ ತುಮಕೂರು, ತಿಪಟೂರು, ಹಾಸನ ಮಾರ್ಗವಾಗಿ ಖಾಸಗಿಯವರಿಗೆ ಬಸ್ಸು ಓಡಿಸುವುದಕ್ಕೆ ಅವಕಾಶವಿಲ್ಲದೆ ಇರುವುದರಿಂದ ಈ ಮಾರ್ಗ ಇದರಲ್ಲಿ ಸೇರಿಲ್ಲದೆ ಇದ್ದರೆ ಸೇರಿಸುವುದಕ್ಕೆ ಏನು ಹೇಳುತ್ತೀರಿ, ಸ್ವಾಮಿ ?

Mr. SPEAKER.—We will have to transplant the route into Kolar, if the supplementary is to become relevant.

Sri S. SIVAPPA.—In view of the fact that the monopoly of nationalisation by Government has resulted in high cost of travelling and inefficiency by not giving proper facilities to the passengers, will the Government consider the possibility, in view of the mixed economy they are following, of allowing both Government buses and private buses to

(SRI S. SIVAPPA)

run in different routes so that there may be a healthy competition in the interests of the travelling public ?

Sri D. DEVARAJ URS.—It is fallacious argument based on incorrect inference. So I cannot answer the question. Monopoly routes are doing well. The Transport Corporation is also doing work to the satisfaction of the public.

ಶ್ರೀ ಎಸ್. ಎಂ. ಕೃಷ್ಣ.—ಕೋಲಾರ ಜಿಲ್ಲೆಯಲ್ಲಿ 11 ಮಾರ್ಗಗಳಲ್ಲಿ ಸರ್ಕಾರಿ ಬಸ್ಸುಗಳು ಖಾಸಗಿಯವರ ಬಸ್ಸುಗಳ ಜೊತೆಯಲ್ಲಿ ಓಡುತ್ತಿವೆ. ಅದರಿಂದ ವರ್ಷಕ್ಕೆ ಆರು ಲಕ್ಷ ರೂಪಾಯಿ ನಷ್ಟವಾಗುತ್ತಿದೆ ಕಾಪೊರ್ರೇಷನ್ನಿಗೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳಿದಂತೆ ಆರು ಲಕ್ಷವಲ್ಲ ಸ್ವಲ್ಪ ಕಡಿಮೆ ಇದೆ. ಆ ಮಾರ್ಗಗಳಲ್ಲಿ ನಷ್ಟವಾಗುತ್ತಿದೆ. ಕೋಲಾರದ ಮಾರ್ಗಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುವ ಹಾಗೆ ಇಲ್ಲ. ಅವು ಬೆಂಗಳೂರು ಡಿವಿಜನ್‌ಗೆ ಸೇರುತ್ತವೆ.

ಶ್ರೀ ವಿ. ಮಸಿಯಪ್ಪ.—ಖಾಸಗಿ ಬಸ್ಸುಗಳವರು ಕೆಲವು ಕಡೆ ಜಾಸ್ತಿ ಛಾರ್ಜ್ ಮಾಡುತ್ತಾರೆಂದು ಮಂತ್ರಿಗಳು ಅಪ್ಪಣೆ ಕೊಡಿಸಿದರು. ಷೆಡ್ಯೂಲ್ ರೇಟ್ ಪ್ರಕಾರ ಎಂದರೆ ಮೈಲಿಗೆ 5 ನಯೇ ಪೈಸೆಗಿಂತ ಜಾಸ್ತಿ ಛಾರ್ಜು ಮಾಡುವ ಹಾಗೆ ಇಲ್ಲ. ಇದಕ್ಕಿಂತ ಜಾಸ್ತಿಯಾಗಿ ಖಾಸಗಿ ಮಾಲೀಕರು ಛಾರ್ಜ್‌ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ದೇವರಾಜ ಅರಸ್.—ಕಾನೂನು ಪ್ರಕಾರ ಹೆಚ್ಚಿಗೆ ರೇಟನ್ನು ಹಾಕಬಾರದು ಎಂದಿದೆ. ಅದಕ್ಕೆ ಒಂದು ಮಿತಿಯನ್ನು ಗೊತ್ತುಮಾಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಚಾರ್ಜ್ ಮಾಡಬಾರದು. ಆದರೆ ಎಲ್ಲೆಲ್ಲಿ ಹೆಚ್ಚಾಗಿ ಚಾರ್ಜ್ ಮಾಡುತ್ತಾರೆ ಎನ್ನುವುದನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ನನ್ನ ಜೊತೆಯಲ್ಲಿ ಬರುವುದಾದರೆ ಕರೆದು ಕೊಂಡುಹೋಗಿ ತೋರಿಸುತ್ತೇನೆ.

ಶ್ರೀ ಎ. ಕೃಷ್ಣ ಶೆಟ್ಟಿ.—ಕೋಲಾರದಲ್ಲಿ ರಾಜ್ಯ ಬಸ್ಸುಗಳೂ ಮತ್ತು ಖಾಸಗಿ ಬಸ್ಸುಗಳೂ ಓಡುತ್ತವೆ. ಖಾಸಗಿ ಬಸ್ಸುಗಳಲ್ಲಿ ಹೆಚ್ಚಾಗಿ ಓವರ್‌ಲೋಡು ಮಾಡಿ ಜನರನ್ನು ಕರೆದುಕೊಂಡು ಹೋಗುತ್ತಾರೆ. ಅದರಿಂದ ಕೆಲವರಿಗೆ ಅನುಕೂಲ ಮತ್ತು ಕೆಲವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಖಾಸಗಿ ಬಸ್ಸುಗಳಲ್ಲಿ ಓವರ್‌ಲೋಡ್ ಎನ್ನುವುದು ನಿತ್ಯದ ಪ್ರತಿನಿತ್ಯದ ಪಾಡಾಗಿದೆ. ಹಿಂದೆ ಕೋಲಾರ ಭಾಗದಲ್ಲಿ ಒಂದು ಸಾರಿ ಫ್ಲೋಲೀಸು ವಾರವನ್ನು ಆಚರಿಸಿದಾಗ ಎಲ್ಲ ಖಾಸಗಿ ಬಸ್ಸುಗಳವರೂ ಓವರ್‌ಲೋಡ್ ಮಾಡುವುದನ್ನು ನಿಲ್ಲಿಸಿದ್ದರಿಂದ ಅಲ್ಲಿ ನಷ್ಟವಾಗುತ್ತಿದ್ದುದು ಹೆಚ್ಚು ಆದಾಯ ಬರುವುದಕ್ಕೆ ಕಾರಣವಾಯಿತು. ಇದರಿಂದ ಏನು ತೋರುತ್ತದೆ ಎಂದರೆ ಖಾಸಗಿ ಮಾಲೀಕರು ವಿಶೇಷವಾಗಿ ಓವರ್‌ಲೋಡ್ ಮಾಡಿ ಸಂಪಾದನೆ ಮಾಡುತ್ತ ಇರುವುದರಿಂದ ಸರ್ಕಾರಕ್ಕೆ ನಷ್ಟವಾಗುವುದಕ್ಕೆ ಕಾರಣವಾಗಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಒಂದು ಸಲ ಬಸ್ ಲೈಸೆನ್ಸ್ ರಿನ್ಯೂ ಮಾಡಿದ ಮೇಲೆ ಮೂರು ವರ್ಷದೊಳಗಾಗಿ ಆ ಮಾರ್ಗವನ್ನು ರಾಷ್ಟ್ರೀಕರಣ ಮಾಡಿದರೆ ಪರಿಹಾರ ಕೊಡಬೇಕೆಂದು ಹೇಳಿದರು. ಇದನ್ನು ಯಾವ ಆಧಾರದ ಮೇಲೆ ಕೊಡುತ್ತಾರೆ ?

ಶ್ರೀ ಡಿ. ದೇವರಾಜ ಅರಸ್.—ಯಾವ ಆಧಾರದ ಮೇಲೆ ಪರಿಹಾರವನ್ನು ಕೊಡುತ್ತೇವೆ ಎನ್ನುವುದಕ್ಕೆ ಆಗಲೇ ಉತ್ತರವನ್ನು ಕೊಟ್ಟಿದ್ದೇನೆ. ಮೋಟಾರು ವಾಹನಗಳಿಗೆ ಸಂಬಂಧಪಟ್ಟ ಕಾನೂನು ಮತ್ತು ನಿಯಮಾವಳಿ ಇದೆ. ಅದರ ಪ್ರಕಾರ ಕೊಡುತ್ತೇವೆ.

ಶ್ರೀ ಎಫ್. ಎಸ್. ತಾವರೆ.—ಒಂದು ಕಡೆ ಸರ್ಕಾರದವರು ಹೊಸ ಹೊಸ ರಸ್ತೆಗಳನ್ನು ರಾಷ್ಟ್ರೀಕರಣ ಮಾಡಲಿಕ್ಕೆ ಹೊರಟಿದ್ದಾರೆ. ಇನ್ನೊಂದು ಕಡೆ ರಾಷ್ಟ್ರೀಕರಣ ಆಗಿರುವಂಥ ರಸ್ತೆಗಳನ್ನು ಖಾಸಗಿಯವರು ಮುಂದೆ ಬಂದರೆ ಬಿಟ್ಟುಕೊಡುತ್ತೇವೆಂದು ಹೇಳುತ್ತಾರೆ. ಈ ಬಗೆ ಸರ್ಕಾರದ ಧೋರಣೆ ಏನು ಎನ್ನುವುದನ್ನು ಸರ್ಕಾರದವರು ಸ್ಪಷ್ಟಪಡಿಸುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ತಿಳಿದುಕೊಂಡಿರುವುದು ತಪ್ಪು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಲ್ಕನೆಯ ಯೋಜನೆಯಲ್ಲಿ ಎಲ್ಲ ಸಾರಿಗೆ ವ್ಯವಸ್ಥೆಯನ್ನೂ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದ್ದಾರೆ. ಕೋಲಾರ ಜಿಲ್ಲೆಯಲ್ಲಿ 6 ವರ್ಷದ ಅವಧಿಯಲ್ಲಿ ಯಾವತ್ತು ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದೆ ?

ಶ್ರೀ ಡಿ. ದೇವರಾಜ ಅರಸ್.—ಮೂರನೆಯ ಯೋಜನೆಯೊಳಗೇ ಆಗುತ್ತದೆ. ನಾಲ್ಕು ಯೋಜನೆಗಳನ್ನು ಹಾಕಿಗುವುದರಲ್ಲೇ ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡಬೇಕು ಎನ್ನುವುದೂ ಒಂದು ಯೋಜನೆ. ಅದನ್ನು ಮೂರನೆಯ ಯೋಜನೆಯ ಅವಧಿಯಲ್ಲಿ ತೆಗೆದುಕೊಳ್ಳುತ್ತೇವೆ.

9-00 A.M.

ಶ್ರೀ ಪಿ. ಬಿ. ಬೊಮ್ಮಣ್ಣ.—ಖಾಸಗಿ ಬಸ್ಸುಗಳಿಗಿಂತ ಸರಕಾರಿ ಬಸ್ಸುಗಳಲ್ಲಿ ಹೆಚ್ಚು ಸೌಕರ್ಯ ಮಾಡಿದ್ದೇವೆಂದು ಹೇಳಿದಿರಿ, ಪ್ರಯಾಣಿಕರ ಸಾಮಾನುಗಳನ್ನು ಬಸ್ಸುಗಳಮೇಲೆ ಹಾಕುವುದಕ್ಕೇನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಬಸ್ ಸ್ಟ್ಯಾಂಡ್ ಇರುವ ಕಡೆ ಹಮಾಲಗಳೆಂದು ನೇಮಕ ಮಾಡಿದ್ದೇವೆ, ಅವರು ಹಾಕುತ್ತಾರೆ. ಅಲ್ಲದೆ ಎಲ್ಲಿ ಪ್ರಯಾಣಿಕರು ಬಸ್ಸು ಹತ್ತುತ್ತಾರೋ ಅಲ್ಲಿ ಕಂಡಕ್ಟರುಗಳು ಹಾಕಬೇಕೆಂದಿದೆ.

Sri S. RAJAGOPAL.—Is it not a fact that the private management are not giving less facilities to their employees than the Government and therefore they are earning more profits ?

Sri D. DEVARAJ URS.—The nationalised transport undertakings are paying more attention to the facilities to their employees as compared to the private operators.

ಶ್ರೀ ಕೆ. ಪಿ. ದೇವಣ್ಣ ಸಿದ್ದಪ್ಪ.—ಪ್ರಯಾಣ ಮಾಡುವವರಿಗಿಂತ ಅಲ್ಲಿನ ನೌಕರರಿಗೆ ಹೆಚ್ಚು ಸೌಕರ್ಯಮಾಡುತ್ತಿದ್ದೀರೆಂಬ ಅಭಿಪ್ರಾಯವಿದೆ; ಪ್ರಯಾಣಕರಿಗಿಂತ ನೌಕರರು ಹೆಚ್ಚು ಎಂದು ನಿಮ್ಮ ಅಭಿಪ್ರಾಯವೆ ?

ಶ್ರೀ ಡಿ. ದೇವರಾಜ ಅರಸ್.—ರಾಷ್ಟ್ರೀಕರಣದ ಉದ್ದೇಶದ ಬಗ್ಗೆ ಪಾಠ ಹೇಳಿಕೊಡಬೇಕೆಂದು ಕಾಣುತ್ತದೆ. ಪ್ರಯಾಣಿಕರಿಗೂ ಅನುಕೂಲ ಮಾಡಿಕೊಡಬೇಕು, ನೌಕರರಿಗೂ ಅನುಕೂಲ ಮಾಡಿಕೊಡಬೇಕು, ನೌಕರರೇನೂ ಪರದೇಶಿಯರಲ್ಲ. ಎಲ್ಲರಿಗೂ ಅನುಕೂಲ ಮಾಡಿಕೊಡಬೇಕು.

ಶ್ರೀ ಎಸ್. ಎಂ. ಕೃಷ್ಣ.—ಕೋಲಾರ ಜಿಲ್ಲೆಯಲ್ಲಿ ಐದಾರು ಲಕ್ಷ ರೂಪಾಯಿ ನಷ್ಟವಾಗುತ್ತಿದೆ ಎಂದು ಒಪ್ಪಿದ್ದೀರಿ; ನಿಮ್ಮ ಕಾರ್ಪೊರೇಷನ್ ಆಗಿರುವುದರಿಂದ ಈ ನಷ್ಟವನ್ನು ಭರಿಸುತ್ತಿದೆ, ಇನ್ನಾವುದಾದರೂ ಖಾಸಗಿ ಸಂಸ್ಥೆಯಾಗಿದ್ದರೆ ಅದು ದಿವಾಳಿಯಾಗುತ್ತಿತ್ತು ಎಂದರೆ ಒಪ್ಪುತ್ತೀರ ?

ಶ್ರೀ ಡಿ. ದೇವರಾಜ ಅರಸ್.—ಖಾಸಗಿ ವಿಷಯ ಹೇಳುವುದಕ್ಕಾಗುವುದಿಲ್ಲ. 1948-49 ರಲ್ಲಿ ಆ ಬಸ್ಸುಗಳನ್ನು ಹಾಕಿದ್ದೆವು, ನಷ್ಟವಾಗುತ್ತಿದೆ ಎಂದು ಗೊತ್ತಾದಮೇಲೆ ಆ ಲೋಪದೋಷಗಳನ್ನು ನಿವಾರಿಸಲು ಈ ಯೋಜನೆ ಮಾಡಿ ಪ್ರಯತ್ನ ಮಾಡುತ್ತಿದ್ದೇವೆ,

———

Amount claimed by the Taluk Development Board by the moiety of costs incurred on Ayurvedic Dispensaries.

*Q.—203. Sri V. MASIYAPPA (Hiriyur).—

Will the Government be pleased to state:—

(*a*) whether the Taluk Development Board, Hiryur, have been claiming for the moiety of costs regarding the expenditure incurred on Anyurvedic Dispensaries ;

(*b*) if so, what is the amount due to them on this account ;

(*c*) the action taken by them on their representation ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) Yes.

(*b*) Rs. 15,354·94 nP. up to 31st March 1963.

(*c*) Instructions have been issued to the officers concerned to settle the claim immediately.